ಸೂ. 55 | **54. ಅಲ್ ಕಮರ್** | ರು. 3

اٰیاتها ٥٥ سُوْرَةُ الْقَمَرِ مَكِّيَّةٌ رُكُوعاتها ٣

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಲೋಕಾಂತ್ಯದ ಘಳಿಗೆ ಸನ್ನಿಹಿತವಾಯಿತು ಮತ್ತು ಚಂದ್ರನು ಹೋಳಾದನು.[1]

اِقْتَرَبَتِ السَّاعَةُ وَانْشَقَّ الْقَمَرُ ١

2. ಆದರೆ ಯಾವ ನಿದರ್ಶನವನ್ನು ಕಂಡರೂ ಇವರು ವಿಮುಖರಾಗುತ್ತಾರೆ ಮತ್ತು ಇದೊಂದು ಪ್ರಚಲಿತ ಜಾದೂಗಾರಿಕೆ ಎನ್ನುತ್ತಾರೆ.

وَاِنْ يَّرَوْا اٰيَةً يُّعْرِضُوْا وَيَقُوْلُوْا سِحْرٌ مُّسْتَمِرٌّ ٢

3. ಇವರು (ಇದನ್ನೂ) ಸುಳ್ಳಾಗಿಸಿ ಬಿಟ್ಟರು ಮತ್ತು ತಮ್ಮ ಸ್ವೇಚ್ಛೆಗಳನ್ನೇ ಅನುಸರಿಸಿದರು. ಪ್ರತಿಯೊಂದು ಪ್ರಕರಣವೂ ಒಂದು ಪರಿಣಾಮಕ್ಕೆ ತಲಪಿಯೇ ತೀರಬೇಕಾಗಿದೆ.

وَكَذَّبُوْا وَاتَّبَعُوْٓا اَهْوَآءَهُمْ وَكُلُّ اَمْرٍ مُّسْتَقِرٌّ ٣

4. ವಿದ್ರೋಹದಿಂದ ತಡೆಯಬಲ್ಲಷ್ಟು ಪಾಠವುಳ್ಳ (ಗತ ಜನಾಂಗಗಳ) ವೃತ್ತಾಂತಗಳು ಇವರ ಮುಂದೆ ಬಂದಿವೆ.

وَلَقَدْ جَآءَهُمْ مِّنَ الْاَنْۢبَآءِ مَا فِيْهِ مُزْدَجَرٌ ٤

5. ಉಪದೇಶದ ಉದ್ದೇಶವನ್ನು ಸಂಪೂರ್ಣವಾಗಿ ಈಡೇರಿಸುವಂತಹ ಯುಕ್ತಿಯೂ ಅದರಲ್ಲಿದೆ. ಆದರೆ ಯಾವ ಎಚ್ಚರಿಕೆಯೂ ಇವರ ಮೇಲೆ ಪರಿಣಾಮ ಬೀರುವುದಿಲ್ಲ-

حِكْمَةٌۢ بَالِغَةٌ فَمَا تُغْنِ النُّذُرُ ٥

---

1. ಅರ್ಥಾತ್- ಚಂದ್ರನ ಹೋಳಾಗುವಿಕೆ, ಲೋಕಾಂತ್ಯದಿನ ಸಮೀಪವಿದೆ ಮತ್ತು ಯಾವ ಸಂದರ್ಭದಲ್ಲಾದರೂ ಅದು ಆಸನ್ನವಾಗಬಹುದು ಎಂಬುದನ್ನು ಸೂಚಿಸುತ್ತದೆ. ಈ ಉದ್ಧರಣೆ ಮತ್ತು ಅದರ ನಂತರದ ವಿವರಣೆ ಆ ಸಂದರ್ಭದಲ್ಲಿ ನಿಜವಾಗಿಯೂ ಹೋಳಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಘಟನೆಯನ್ನು ಕಣ್ಣಾರೆ ಕಂಡವರ ಪ್ರಕಾರ ಹುಣ್ಣಿಮೆಯ ಚಂದ್ರ ಪ್ರತ್ಯಕ್ಷವಾದ ಸ್ವಲ್ಪ ಹೊತ್ತಿನಲ್ಲೇ ಏಕಾಏಕಿಯಾಗಿ ಹೋಳಾಯಿತು. ಅದರ ಎರಡು ಹೋಳುಗಳು ಬೆಟ್ಟದ ಎರಡು ಕಡೆಗಳಲ್ಲಿ ಕಂಡು ಬಂತು. ಅನಂತರ ಕ್ಷಣ ಮಾತ್ರದಲ್ಲಿ ಅದು ಮತ್ತೆ ಒಂದುಗೂಡಿತು. ಈ ಘಟನೆ ಪ್ರವಾದಿವರ್ಯರ(ಸ) ಸೂಚನೆಯಂತೆ ನಡೆದಿತ್ತು ಮತ್ತು ಮಕ್ಕಾದ ಸತ್ಯನಿಷೇಧಿಗಳು ಪವಾಡವನ್ನು ತೋರಿಸುವ ಬೇಡಿಕೆಯನ್ನಿರಿಸಿದಾಗ ಈ ಪವಾಡವನ್ನು ತೋರಿಸಲಾಗಿತ್ತು ಎಂಬ ಪ್ರವಚನಕಾರರ ಮಾತಿಗೆ ಪ್ರವಾದಿವಚನಗಳಲ್ಲಿ ಯಾವುದೇ ಆಧಾರವಿಲ್ಲ.

6. ಆದುದರಿಂದ ಸಂದೇಶವಾಹಕರೇ, ಇವರಿಂದ ಮುಖ ತಿರುಗಿಸಿ ಕೊಳ್ಳಿರಿ. ಕೂಗುವಾತನು ಒಂದು ಅತ್ಯಂತ ಅಪ್ರಿಯ ವಸ್ತುವಿನ ಕಡೆಗೆ ಕೂಗುವಂದು,

فَتَوَلَّ عَنْهُمْ ۘ يَوْمَ يَدْعُ الدَّاعِ إِلَىٰ شَيْءٍ نُّكُرٍ ﴿٦﴾

7. ಜನರು ಭಯಗ್ರಸ್ತ ದೃಷ್ಟಿಯೊಂದಿಗೆ ತಮ್ಮ ಸಮಾಧಿಗಳಿಂದ, ಚದುರಿದ ಮಿಡತೆಗಳಂತೆ ಹೊರಬರುವವರು-

خُشَّعًا أَبْصَارُهُمْ يَخْرُجُونَ مِنَ الْأَجْدَاثِ كَأَنَّهُمْ جَرَادٌ مُّنتَشِرٌ ﴿٧﴾

8. ಕೂಗುವವನ ಕಡೆಗೆ ಧಾವಿಸುತ್ತಿರುವವರು. (ಭೂಲೋಕದಲ್ಲಿ ಅದನ್ನು ನಿಷೇಧಿಸುತ್ತಿದ್ದ) ಅದೇ ಸತ್ಯನಿಷೇಧಿಗಳು ಅಂದು, ಇದು ಕಠಿಣವಾದ ದಿನ ಎಂದು ಹೇಳುವರು.

مُّهْطِعِينَ إِلَى الدَّاعِ ۖ يَقُولُ الْكَافِرُونَ هَٰذَا يَوْمٌ عَسِرٌ ﴿٨﴾

9. ಇವರಿಗಿಂತ ಮುಂಚೆ ನೂಹರ ಜನಾಂಗವು ಸುಳ್ಳಾಗಿಸಿದೆ. ಅವರು ನಮ್ಮ ದಾಸನನ್ನು ಸುಳ್ಳುಗಾರನೆಂದರು. ಇವನು ಹುಚ್ಚನೆಂದರು. ಮತ್ತು ಅವರು (ನೂಹ್) ತೀವ್ರವಾಗಿ ಗದರಿಸಲ್ಪಟ್ಟರು.

كَذَّبَتْ قَبْلَهُمْ قَوْمُ نُوحٍ فَكَذَّبُوا عَبْدَنَا وَقَالُوا مَجْنُونٌ وَازْدُجِرَ ﴿٩﴾

10. ಕೊನೆಗೆ ಅವರು, "ನಾನು ಸೋತೆ. ಇನ್ನು ನೀನು ಇವರ ಮೇಲೆ ಪ್ರತೀಕಾರ ತೀರಿಸು" ಎಂದು ತಮ್ಮ ಪ್ರಭುವನ್ನು ಪ್ರಾರ್ಥಿಸಿದರು.

فَدَعَا رَبَّهُ أَنِّي مَغْلُوبٌ فَانتَصِرْ ﴿١٠﴾

11. ಆಗ ನಾವು ಧಾರಾಕಾರ ಮಳೆಯಿಂದ ಆಕಾಶದ ದ್ವಾರಗಳನ್ನು ತೆರೆದು ಬಿಟ್ಟೆವು;

فَفَتَحْنَا أَبْوَابَ السَّمَاءِ بِمَاءٍ مُّنْهَمِرٍ ﴿١١﴾

12. ನೆಲವನ್ನು ಸೀಳಿ ಚಿಲುಮೆಗಳಾಗಿ ಮಾರ್ಪಡಿಸಿ ಬಿಟ್ಟೆವು ಮತ್ತು ಈ ನೀರೆಲ್ಲ ವಿಧಿಸಲ್ಪಟ್ಟಿದ್ದ ಆ ಕಾರ್ಯವನ್ನು ಪೂರ್ತಿಗೊಳಿಸಲಿಕ್ಕಾಗಿ ಸೇರಿಕೊಂಡಿತು.

وَفَجَّرْنَا الْأَرْضَ عُيُونًا فَالْتَقَى الْمَاءُ عَلَىٰ أَمْرٍ قَدْ قُدِرَ ﴿١٢﴾

13. ನೂಹರನ್ನು ನಾವು ಹಲಗೆ ಹಾಗೂ ಮೊಳೆಗಳಿದ್ದ ವಸ್ತುವೊಂದರ[2] ಮೇಲೆ ಸವಾರಿ ಮಾಡಿಸಿದೆವು.

وَحَمَلْنَاهُ عَلَىٰ ذَاتِ أَلْوَاحٍ وَدُسُرٍ ﴿١٣﴾

14. ಅದು ನಮ್ಮ ಮೇಲ್ನೋಟದಲ್ಲಿ ಚಲಿಸುತ್ತಿತ್ತು. ಇದು ಅಪಮಾನಿಸಲ್ಪಟ್ಟ ವ್ಯಕ್ತಿಯ ಪರವಾಗಿ ಪ್ರತೀಕಾರವಾಗಿತ್ತು.

تَجْرِي بِأَعْيُنِنَا جَزَاءً لِّمَن كَانَ كُفِرَ ﴿١٤﴾

15. ಆ ನಾವೆಯನ್ನು ನಾವು ಒಂದು ನಿದರ್ಶನವಾಗಿ ಉಳಿಸಿದೆವು. ಇದರಿಂದ ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَد تَّرَكْنَاهَا آيَةً فَهَلْ مِن مُّدَّكِرٍ ﴿١٥﴾

2. ಅರ್ಥಾತ್- ಚಂಡಮಾರುತ ಬೀಸುವುದಕ್ಕೆ ಮೊದಲು ಅಲ್ಲಾಹನ ಆದೇಶದಂತೆ ಹ. ನೂಹ್(ಅ) ನಿರ್ಮಿಸಿದ್ದ ನಾವೆ.

16. ನೋಡಿರಿ, ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದುವು ನನ್ನ ಎಚ್ಚರಿಕೆಗಳು.

فَكَيْفَ كَانَ عَذَابِىْ وَنُذُرِ ﴿١٦﴾

17. ನಾವು ಈ ಕುರ್‌ಆನನ್ನು ಉಪದೇಶಕ್ಕಾಗಿ ಸುಲಭ ಸಾಧನವಾಗಿ ಮಾಡಿರುವೆವು.[3] ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَدْ يَسَّرْنَا الْقُرْاٰنَ لِلذِّكْرِ فَهَلْ مِنْ مُّدَّكِرٍ ﴿١٧﴾

18. ಆದ್ ಜನಾಂಗದವರು ಧಿಕ್ಕರಿಸಿದರು. ನೋಡಿರಿ, ಆಗ ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದುವು ನನ್ನ ಎಚ್ಚರಿಕೆಗಳು?

كَذَّبَتْ عَادٌ فَكَيْفَ كَانَ عَذَابِىْ وَنُذُرِ ﴿١٨﴾

19. ನಾವು ಒಂದು ನಿರಂತರ ಅಶುಭದ ದಿನ ಅವರ ಮೇಲೆ ತೀವ್ರವಾದ ಬಿರುಗಾಳಿಯನ್ನು ಕಳುಹಿಸಿದೆವು-

اِنَّاۤ اَرْسَلْنَا عَلَيْهِمْ رِيْحًا صَرْصَرًا فِىْ يَوْمِ نَحْسٍ مُّسْتَمِرٍّ ﴿١٩﴾

20. ಬೇರು ಸಹಿತ ಕಿತ್ತು ಬೀಳುವ ಖರ್ಜೂರದ ಕಾಂಡಗಳಂತೆ ಅದು ಜನರನ್ನು ಎತ್ತಿ ಎತ್ತಿ ಎಸೆಯುತ್ತಿತ್ತು.

تَنْزِعُ النَّاسَ ۙ كَاَنَّهُمْ اَعْجَازُ نَخْلٍ مُّنْقَعِرٍ ﴿٢٠﴾

21. ಆದುದರಿಂದ ನೋಡಿರಿ, ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದುವು ನನ್ನ ಎಚ್ಚರಿಕೆಗಳು.

فَكَيْفَ كَانَ عَذَابِىْ وَنُذُرِ ﴿٢١﴾

22. ನಾವು ಈ ಕುರ್‌ಆನನ್ನು ಉಪದೇಶಕ್ಕಾಗಿ ಸುಲಭ ಸಾಧನವಾಗಿ ಮಾಡಿರುವೆವು. ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَدْ يَسَّرْنَا الْقُرْاٰنَ لِلذِّكْرِ فَهَلْ مِنْ مُّدَّكِرٍ ﴿٢٢﴾

23. ಸಮೂದ್ (ಜನಾಂಗದವರು) ಎಚ್ಚರಿಕೆಗಳನ್ನು ತಿರಸ್ಕರಿಸಿದರು.

كَذَّبَتْ ثَمُوْدُ بِالنُّذُرِ ﴿٢٣﴾

24. ಮತ್ತು ಹೀಗೆ ಹೇಳ ತೊಡಗಿದರು- "ನಮ್ಮಲ್ಲೇ ಇರುವಂತಹ ಒಬ್ಬ ವ್ಯಕ್ತಿ. ನಾವು ಅವನನ್ನು ಹಿಂಬಾಲಿಸಬೇಕೆ? ಅವನ ಅನುಸರಣೆಯನ್ನು ಸ್ವೀಕರಿಸಿಕೊಂಡೆವೆಂದರೆ ನಾವು ದಾರಿಗೆಟ್ಟಿದ್ದೇವೆ ಹಾಗೂ ತಿಳಿಗೇಡಿಗಳಾಗಿದ್ದೇವೆಂದೇ ಅರ್ಥ.

فَقَالُوْۤا اَبَشَرًا مِّنَّا وَاحِدًا نَّتَّبِعُهٗۤ ۙ اِنَّاۤ اِذًا لَّفِىْ ضَلٰلٍ وَّسُعُرٍ ﴿٢٤﴾

25. ನಮ್ಮ ನಡುವೆ 'ದಿವ್ಯ ಬೋಧನೆ' ಇಳಿಸಲ್ಪಡಲು ಇವನೊಬ್ಬನೇ ಇದ್ದುದೇ? ವಾಸ್ತವದಲ್ಲಿ ಇವನು ಮಹಾ ಸುಳ್ಳುಗಾರ ಮತ್ತು ದುರಹಂಕಾರಿ ಆಗಿದ್ದಾನೆ."

ءَاُلْقِىَ الذِّكْرُ عَلَيْهِ مِنْۢ بَيْنِنَا بَلْ هُوَ كَذَّابٌ اَشِرٌ ﴿٢٥﴾

---

3. ಅರ್ಥಾತ್- ವಿದ್ರೋಹಿ ಜನಾಂಗಗಳ ಮೇಲೆ ಇಳಿದ ಪಾಠಬೋಧಕವಾದ ಯಾತನೆ, ಉಪದೇಶ ಪಡೆಯುವ ಉಪಾಧಿಗಳಲ್ಲೊಂದಾಗಿದೆ. ಸಾಕ್ಷ್ಯಾಧಾರ ಮತ್ತು ಉಪದೇಶಗಳೊಂದಿಗೆ ಸನ್ಮಾರ್ಗ ತೋರುವ ಈ ಪವಿತ್ರ ಕುರ್‌ಆನ್ ಉಪದೇಶ ಪಡೆಯುವ ಮತ್ತೊಂದು ಉಪಾಧಿಯಾಗಿದೆ. ಮೊದಲನೆಯ ಉಪಾಧಿಗಿಂತ ಎರಡನೆಯ ಉಪಾಧಿ ಹೆಚ್ಚು ಸರಳವಾದುದಾಗಿದೆ. ಹಾಗಿದ್ದರೂ ನೀವು ಯಾಕೆ ಅದರಿಂದ ಪ್ರಯೋಜನ ಪಡೆಯುವುದಿಲ್ಲ? ಯಾತನೆಯನ್ನು ನೋಡುವುದರ ಬಗ್ಗೆಯೇ ಯಾಕೆ ಪಟ್ಟು ಹಿಡಿಯುತ್ತಿದ್ದೀರಿ.

26. (ನಾವು ನಮ್ಮ ಸಂದೇಶವಾಹಕನೊಡನೆ ಹೀಗೆ ಹೇಳಿದೆವು.) "ಯಾರು ಮಹಾ ಸುಳ್ಳುಗಾರ ಹಾಗೂ ದುರಹಂಕಾರಿಯೆಂದು ನಾಳೆಯೇ ಇವರಿಗೆ ತಿಳಿಯಲಿದೆ.

سَيَعْلَمُونَ غَدًا مَّنِ الْكَذَّابُ الْأَشِرُ ﴿٢٦﴾

27. ನಾವು ಒಂದು ಒಂಟೆಯನ್ನು ಇವರ ಪಾಲಿಗೆ ಪರೀಕ್ಷೆಯಾಗಿ ಕಳುಹಿಸುತ್ತಿದ್ದೇವೆ. ಇನ್ನು ಇವರ ಅಂತಿಮ ಪರಿಣಾಮವೇನಾಗುತ್ತದೆಂದು ತುಸು ತಾಳ್ಮೆಯಿಂದ ನೋಡಿರಿ.

إِنَّا مُرْسِلُوا النَّاقَةِ فِتْنَةً لَّهُمْ فَارْتَقِبْهُمْ وَاصْطَبِرْ ﴿٢٧﴾

28. ನೀರನ್ನು ಇವರ ಮತ್ತು ಒಂಟೆಯ ನಡುವೆ ಹಂಚಲಾಗುವುದೆಂದೂ ಪ್ರತಿಯೊಬ್ಬನು ತನ್ನ ಸರದಿಯ ದಿನ ನೀರಿಗೆ ಬರಬೇಕೆಂದೂ ಇವರಿಗೆ ಸೂಚನೆ ಕೊಟ್ಟುಬಿಡಿರಿ.[4]

وَنَبِّئْهُمْ أَنَّ الْمَاءَ قِسْمَةٌ بَيْنَهُمْ ۖ كُلُّ شِرْبٍ مُّحْتَضَرٌ ﴿٢٨﴾

29. ಕೊನೆಗೆ ಅವರು ತಮ್ಮ ವ್ಯಕ್ತಿಯನ್ನು ಕೂಗಿ ಕರೆದರು. ಅವನು ಈ ಕಾರ್ಯದ ಹೊಣೆ ಹೊತ್ತನು ಮತ್ತು ಒಂಟೆಯನ್ನು ಕೊಂದು ಹಾಕಿದನು.

فَنَادَوْا صَاحِبَهُمْ فَتَعَاطَىٰ فَعَقَرَ ﴿٢٩﴾

30. ಅನಂತರ ನೋಡಿರಿ, ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದುವು ನನ್ನ ಎಚ್ಚರಿಕೆಗಳು?

فَكَيْفَ كَانَ عَذَابِي وَنُذُرِ ﴿٣٠﴾

31. ನಾವು ಅವರ ಮೇಲೆ ಒಂದೇ ಘನ ಸ್ಫೋಟವನ್ನು ಕಳುಹಿಸಿದೆವು ಮತ್ತು ಅವರು ಹಟ್ಟಿಯವರು ತುಳಿದ ಕಸದಂತೆ ಹೊಟ್ಟಾಗಿ ಬಿಟ್ಟರು.[5]

إِنَّا أَرْسَلْنَا عَلَيْهِمْ صَيْحَةً وَاحِدَةً فَكَانُوا كَهَشِيمِ الْمُحْتَظِرِ ﴿٣١﴾

32. ನಾವು ಈ ಕುರ್‌ಆನನ್ನು ಉಪದೇಶಕ್ಕಾಗಿ ಸುಲಭ ಸಾಧನವಾಗಿ ಮಾಡಿರುವೆವು. ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَدْ يَسَّرْنَا الْقُرْآنَ لِلذِّكْرِ فَهَلْ مِن مُّدَّكِرٍ ﴿٣٢﴾

4. ಇದು, "ಒಂಟೆಯನ್ನು ನಾವು ಅವರ ಪಾಲಿಗೆ ಫಿತ್ನವನ್ನಾಗಿ ಮಾಡಿ ಕಳುಹಿಸುತ್ತಿದ್ದೇವೆ" ಎಂಬ ಮಾತಿನ ವಿವರಣೆ. ಆ ಫಿತ್ನ ಏನಾಗಿತ್ತೆಂದರೆ, -ಹಠಾತ್ತನೆ ಒಂದು ಒಂಟೆಯನ್ನು ತಂದು ಅವರ ಮುಂದೆ ನಿಲ್ಲಿಸಲಾಯಿತು. ಒಂದು ದಿನ ಈ ಒಂಟೆ ಮಾತ್ರ ನೀರು ಕುಡಿಯುವುದು ಮತ್ತು ಮರುದಿನ ನೀವು ನಿಮಗಾಗಿ ಮತ್ತು ನಿಮ್ಮ ಜಾನುವಾರುಗಳಿಗಾಗಿ ನೀರನ್ನು ಪಡೆಯಬಹುದು. ಒಂಟೆ ನೀರು ಕುಡಿಯಬೇಕಾದ ದಿನ ನಿಮ್ಮಲ್ಲಿ ಯಾರೂ ಯಾವುದೇ ಬಾವಿ ಅಥವಾ ಚಿಲುಮೆಯಿಂದ ನೀರನ್ನು ಪಡೆಯಬಾರದು, ಅಂತೆಯೇ ಜಾನುವಾರುಗಳಿಗೂ ಕುಡಿಸಲಿಕ್ಕೂ ಬಾರದು ಎಂದು ಅವರೊಡನೆ ಹೇಳಲಾಯಿತು. ಯಾವುದೇ ಸೇನಾಬಲವಾಗಲಿ, ಜನಬೆಂಬಲವಾಗಲಿ ಇಲ್ಲದಂತಹ ವ್ಯಕ್ತಿ ಎಂದು ಅವರು ಯಾರ ಬಗ್ಗೆ ಹೇಳುತ್ತಿದ್ದರೋ ಆ ವ್ಯಕ್ತಿಯ ಕಡೆಯಿಂದಲೇ ಈ ಪಂಥಾಹ್ವಾನವನ್ನು ನೀಡಲಾಯಿತು.

5. ಜಾನುವಾರುಗಳನ್ನು ಸಾಕುವವರು ಜಾನುವಾರುಗಳಿಗಾಗಿ ಇರುವ ಬೇಲಿಯನ್ನು, ಕಟ್ಟಿಗೆ ಮತ್ತು ಮುಳ್ಳುಕಂಟಿಗಳಿಂದ ಭದ್ರಪಡಿಸುತ್ತಾರೆ. ಬೇಲಿಯ ಮುಳ್ಳುಕಂಟಿಗಳು ಕ್ರಮೇಣ ಒಣಗಿ ಉದುರಿ ಹೋಗುತ್ತವೆ. ಜಾನುವಾರುಗಳ ತುಳಿತದಿಂದ ಅವು ಧೂಳಿನ ಕಣಗಳಂತಾಗಿ ಬಿಡುತ್ತವೆ. ಸಮೂದ್ ಗೋತ್ರದ ತುಳಿಯಲ್ಪಟ್ಟ ಶಿಥಿಲ ಶವಗಳನ್ನು ಈ ಧೂಳಿನ ಕಣಗಳಿಗೆ ಹೋಲಿಸಲಾಗಿದೆ.

33. ಲೂತರ ಜನಾಂಗವು ಎಚ್ಚರಿಕೆಗಳನ್ನು ತಿರಸ್ಕರಿಸಿತು-

كَذَّبَتْ قَوْمُ لُوطٍۭ بِٱلنُّذُرِ ﴿٣٣﴾

34. ಮತ್ತು ನಾವು ಅವರ ಮೇಲೆ ಕಲ್ಲಿನ ಮಳೆಗರೆಯುವಂತಹ ಬಿರುಗಾಳಿಯನ್ನು ಕಳುಹಿಸಿದೆವು. ಲೂತರ ಮನೆಯವರು ಮಾತ್ರ ಅದರಿಂದ ರಕ್ಷಿತರಾದರು. ಅವರನ್ನು ನಾವು ನಮ್ಮ ಅನುಗ್ರಹದಿಂದ ರಾತ್ರೆಯ ಅಂತಿಮ ಜಾವದಲ್ಲಿ ಪಾರುಗೊಳಿಸಿದೆವು-

إِنَّآ أَرْسَلْنَا عَلَيْهِمْ حَاصِبًا إِلَّآ ءَالَ لُوطٍ ۖ نَّجَّيْنَٰهُم بِسَحَرٍ ﴿٣٤﴾

35. ಕೃತಜ್ಞನಾಗಿರುವಾತನಿಗೆ ನಾವು ಈ ರೀತಿ ಪ್ರತಿಫಲ ನೀಡುತ್ತೇವೆ.

نِّعْمَةً مِّنْ عِندِنَا ۚ كَذَٰلِكَ نَجْزِى مَن شَكَرَ ﴿٣٥﴾

36. ಲೂತರು ತಮ್ಮ ಜನಾಂಗದವರಿಗೆ ನಮ್ಮ ಹಿಡಿತದ ಕುರಿತು ಎಚ್ಚರಿಕೆ ನೀಡಿದ್ದರು. ಆದರೆ ಅವರು ಎಲ್ಲ ಎಚ್ಚರಿಕೆಗಳ ಬಗ್ಗೆ ಸಂಶಯ ತಾಳಿ ಮಾತುಗಳಲ್ಲೇ ಹಾರಿಸಿ ಬಿಡುತ್ತಿದ್ದರು.

وَلَقَدْ أَنذَرَهُم بَطْشَتَنَا فَتَمَارَوْا۟ بِٱلنُّذُرِ ﴿٣٦﴾

37. ಮಾತ್ರವಲ್ಲದೆ ಅವರು ಅವರನ್ನು (ಲೂತರನ್ನು) ತಮ್ಮ ಅತಿಥಿಗಳನ್ನು ರಕ್ಷಿಸದಂತೆ ತಡೆಯಲು ಪ್ರಯತ್ನಿಸಿದರು. ಕೊನೆಗೆ, ಇನ್ನು ನಮ್ಮ ಯಾತನೆಯ ಮತ್ತು ಎಚ್ಚರಿಕೆಗಳ ಸವಿಯನ್ನು ಉಣ್ಣಿರೆಂದು ನಾವು ಅವರ ಕಣ್ಣುಗಳನ್ನು ಕುರುಡಾಗಿಸಿ ಬಿಟ್ಟೆವು.

وَلَقَدْ رَٰوَدُوهُ عَن ضَيْفِهِۦ فَطَمَسْنَآ أَعْيُنَهُمْ فَذُوقُوا۟ عَذَابِى وَنُذُرِ ﴿٣٧﴾

38. ಪ್ರಾತಃಕಾಲದಲ್ಲೇ ಒಂದು ಸ್ಥಿರ ಯಾತನೆಯು ಅವರನ್ನು ಆವರಿಸಿತು.

وَلَقَدْ صَبَّحَهُم بُكْرَةً عَذَابٌ مُّسْتَقِرٌّ ﴿٣٨﴾

39. ಇನ್ನು ನನ್ನ ಯಾತನೆಯ ಮತ್ತು ನನ್ನ ಎಚ್ಚರಿಕೆಗಳ ರುಚಿಯನ್ನು ಸವಿಯಿರಿ.

فَذُوقُوا۟ عَذَابِى وَنُذُرِ ﴿٣٩﴾

40. ನಾವು ಈ ಕುರ್‌ಆನನ್ನು ಉಪದೇಶಕ್ಕಾಗಿ ಸುಲಭ ಸಾಧನವಾಗಿ ಮಾಡಿರುವೆವು. ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَدْ يَسَّرْنَا ٱلْقُرْءَانَ لِلذِّكْرِ فَهَلْ مِن مُّدَّكِرٍ ﴿٤٠﴾

41. ಫಿರ್‌ಔನನ ಮನೆತನದ ಬಳಿಗೂ ಎಚ್ಚರಿಕೆಗಳು ಬಂದಿದ್ದುವು.

وَلَقَدْ جَآءَ ءَالَ فِرْعَوْنَ ٱلنُّذُرُ ﴿٤١﴾

42. ಆದರೆ ಅವರು ನಮ್ಮ ಎಲ್ಲ ನಿದರ್ಶನಗಳನ್ನು ತಿರಸ್ಕರಿಸಿ ಬಿಟ್ಟರು. ಕೊನೆಗೆ ನಾವು ಅವರನ್ನು ಹಿಡಿದೆವು- ಪ್ರಚಂಡ ಸಾಮರ್ಥ್ಯವುಳ್ಳವನೊಬ್ಬನು ಹಿಡಿಯುವಂತೆ.

كَذَّبُوا۟ بِـَٔايَٰتِنَا كُلِّهَا فَأَخَذْنَٰهُمْ أَخْذَ عَزِيزٍ مُّقْتَدِرٍ ﴿٤٢﴾

43. ನಿಮ್ಮ ಸತ್ಯನಿಷೇಧಿಗಳು ಅವರಿಗಿಂತ ಉತ್ತಮರೇ?[6] ಅಥವಾ ದಿವ್ಯಗ್ರಂಥಗಳಲ್ಲಿ ನಿಮಗಾಗಿ ಕ್ಷಮೆ ಲಿಖಿತವಾಗಿದೆಯೇ?

أَكُفَّارُكُمْ خَيْرٌ مِّنْ أُولَٰٓئِكُمْ أَمْ لَكُم بَرَآءَةٌ فِى ٱلزُّبُرِ ﴿٤٣﴾

44. ಅಥವಾ ಇವರು, ನಾವು ಒಂದು ಪ್ರಬಲ ಪಂಗಡವಾಗಿದ್ದು ನಮ್ಮನ್ನು ರಕ್ಷಿಸಿಕೊಳ್ಳಬಲ್ಲೆವೆಂದು ಹೇಳುತ್ತಿರುವರೇ?

أَمْ يَقُولُونَ نَحْنُ جَمِيعٌ مُّنتَصِرٌ ﴿٤٤﴾

45. ಸದ್ಯದಲ್ಲೇ ಈ ಪಂಗಡವು ಸೋತು ಹೋಗುವುದು ಮತ್ತು ಇವರೆಲ್ಲರೂ ಬೆನ್ನು ತಿರುಗಿಸಿ ಓಡಿ ಹೋಗುವರು.

سَيُهْزَمُ ٱلْجَمْعُ وَيُوَلُّونَ ٱلدُّبُرَ ﴿٤٥﴾

46. ನಿಜವಾಗಿ ಇವರ ವಿಚಾರಣೆಗೆಂದು ವಾಗ್ದಾನ ಮಾಡಲಾಗಿರುವ ನೈಜ ಸಮಯವು ಪುನರುತ್ಥಾನ ದಿನವಾಗಿದೆ. ಅದು ಭಾರೀ ವಿಪತ್ತಿನ ಮತ್ತು ಅತ್ಯಂತ ಕಹಿಯಾದ ಘಳಿಗೆಯಾಗಿದೆ.

بَلِ ٱلسَّاعَةُ مَوْعِدُهُمْ وَٱلسَّاعَةُ أَدْهَىٰ وَأَمَرُّ ﴿٤٦﴾

47. ಈ ಅಪರಾಧಿಗಳು ವಾಸ್ತವದಲ್ಲಿ ಅಪಗ್ರಹಿಕೆಗೆ ಒಳಗಾಗಿದ್ದಾರೆ ಮತ್ತು ಇವರ ಬುದ್ಧಿ ಕೆಟ್ಟಿದೆ.

إِنَّ ٱلْمُجْرِمِينَ فِى ضَلَٰلٍ وَسُعُرٍ ﴿٤٧﴾

48. ಇವರು ಅಧೋಮುಖಿಗಳಾಗಿ ನರಕಾಗ್ನಿಯಲ್ಲಿ ಎಳೆಯಲ್ಪಡುವ ದಿನ, ಅವರೊಡನೆ- "ಈಗ ನರಕದ ಜ್ವಾಲೆಯ ರುಚಿಯನ್ನು ಸವಿಯಿರಿ" ಎನ್ನಲಾಗುವುದು.

يَوْمَ يُسْحَبُونَ فِى ٱلنَّارِ عَلَىٰ وُجُوهِهِمْ ذُوقُوا۟ مَسَّ سَقَرَ ﴿٤٨﴾

49. ನಾವು ಪ್ರತಿಯೊಂದು ವಸ್ತುವನ್ನು ಒಂದು ವಿಧಿ ನಿಯಮಕ್ಕನುಸಾರ ಸೃಷ್ಟಿಸಿರುವೆವು.[7]

إِنَّا كُلَّ شَىْءٍ خَلَقْنَٰهُ بِقَدَرٍ ﴿٤٩﴾

50. ನಮ್ಮ ಆಜ್ಞೆಯು ಕೇವಲ ಒಂದೇ ಆಜ್ಞೆಯಾಗಿರುತ್ತದೆ ಮತ್ತು ರೆಪ್ಪೆ ಬಡಿಯುವುದರೊಳಗೆ ಅದು ಕಾರ್ಯಗತವಾಗಿ ಬಿಡುತ್ತದೆ.

وَمَآ أَمْرُنَآ إِلَّا وَٰحِدَةٌ كَلَمْحٍۭ بِٱلْبَصَرِ ﴿٥٠﴾

51. ನಿಮ್ಮಂತಹ ಅನೇಕರನ್ನು ನಾವು ನಾಶಗೊಳಿಸಿರುತ್ತೇವೆ. ಹೀಗಿರುತ್ತ ಉಪದೇಶ ಪಡೆಯುವವರು ಯಾರಾದರೂ ಇದ್ದಾರೆಯೇ?

وَلَقَدْ أَهْلَكْنَآ أَشْيَاعَكُمْ فَهَلْ مِن مُّدَّكِرٍ ﴿٥١﴾

52. ಇವರು ಮಾಡಿರುವುದೆಲ್ಲವೂ ದಾಖಲೆಗಳಲ್ಲಿ ಉಲ್ಲೇಖಿತವಿದೆ.

وَكُلُّ شَىْءٍ فَعَلُوهُ فِى ٱلزُّبُرِ ﴿٥٢﴾

6. ಇದು ಕುರೈಶರ ಕುರಿತು ಇರುವ ಸಂಬೋಧನೆ. ಅರ್ಥಾತ್ ಯಾವ ಸತ್ಯನಿಷೇಧ, ಸುಳ್ಳಾಗಿಸುವಿಕೆ ಮತ್ತು ಹಟಮಾರಿತನಕ್ಕಾಗಿ ಇತರ ಜನಾಂಗಗಳಿಗೆ ಶಿಕ್ಷೆ ನೀಡಲಾಗಿದೆಯೋ, ಅದೇ ಧೋರಣೆಯನ್ನು ಕೈಗೊಂಡುದಕ್ಕಾಗಿ ನಿಮಗೂ ಯಾಕೆ ಶಿಕ್ಷೆ ನೀಡಬಾರದು? ಶಿಕ್ಷೆ ನೀಡದಿರಲು ನಿಮ್ಮಲ್ಲಿರುವ ಒಳಿತಾದರೂ ಯಾವುದು?

7. ಅರ್ಥಾತ್- ಲೋಕದ ಯಾವ ವಸ್ತುವನ್ನೂ ಹಠಾತ್ತನೆ ಸೃಷ್ಟಿಸಲಾಗಿಲ್ಲ. ಪ್ರತಿಯೊಂದು ವಸ್ತುವಿಗೂ ಒಂದು ಅದೃಷ್ಟವಿದೆ. ಅದರಂತೆ ನಿರ್ದಿಷ್ಟ ವೇಳೆಗೆ ಅದು ರೂಪುತಾಳುತ್ತದೆ. ನಿರ್ದಿಷ್ಟ ಆಕಾರವನ್ನು ಪಡೆಯುತ್ತದೆ, ನಿರ್ದಿಷ್ಟ ಹಂತದ ತನಕ ಬೆಳೆಯುತ್ತದೆ, ನಿರ್ದಿಷ್ಟ ಅವಧಿಯ ತನಕ ಬಾಕಿಯುಳಿಯುತ್ತದೆ ಮತ್ತು ನಿರ್ದಿಷ್ಟ ವೇಳೆಗೆ ಕೊನೆಗೊಳ್ಳುತ್ತದೆ.

53. ಚಿಕ್ಕದೂ ದೊಡ್ಡದೂ ಪ್ರತಿಯೊಂದು ವಿಷಯವೂ ಲಿಖಿತವಾಗಿ ಇದೆ.	وَكُلُّ صَغِيْرٍ وَّكَبِيْرٍ مُّسْتَطَرٌ ﴿٥٣﴾
54. ಆಜ್ಞೋಲ್ಲಂಘನೆಯಿಂದ ದೂರವಿರುವವರು ಖಂಡಿತವಾಗಿಯೂ ಸ್ವರ್ಗೋದ್ಯಾನಗಳಲ್ಲಿ ಮತ್ತು ಕಾಲುವೆಗಳಲ್ಲಿ ಇರುವರು-	اِنَّ الْمُتَّقِيْنَ فِيْ جَنّٰتٍ وَّنَهَرٍ ﴿٥٤﴾
55. ಅದು ನೈಜ ಗೌರವದ ಸ್ಥಾನ, ಅದು ಅಧಿಕಾರ ಸಂಪನ್ನ ಸಾಮ್ರಾಟನ ಬಳಿಯಲ್ಲೇ ಇದೆ.	فِيْ مَقْعَدِ صِدْقٍ عِنْدَ مَلِيْكٍ مُّقْتَدِرٍ ﴿٥٥﴾